ELECTION OF MEMBERS TO THE COMMITTEE ON GOVERNMENT ASSURANCES

Results Announcements.

MR. SPEAKER.—I have one announcement to make. The following members are declared elected to the Committee on Government Assurances of the Assembly :—

1. Sri M. Basavaraju
2. Sri S. H. Puttaranganath
3. Sri B. Parameswarappa
4. Sri Raja Pid Naik
5. Sri B. S. Patil
6. Sri K. N. Veerappa Gowda
7. Sri B. N. Rame Gowda
8. Sri R. Nagan Gouda

BUDGET ESTIMATES FOR 1967-68--DEMANDS FOR GRANTS

Demand No. 15 and 53

(continued.)

[MR. DEPUTY SPEAKER in the Chair.]

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ (ಪುತ್ತೂರು).—ಮಾನ್ಯ ಸಭಾಪತಿಗಳೇ, ಆಹಾರ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಮಂಡಿಸಿದ ಡಿಮ್ಯಾಂಡನ್ನು ನ್ಯಾಗತಿಸುತ್ತಾ ನಾಲ್ಕು ಮಾತು ಹೇಳಲು ಬಯಸುತ್ತೇನೆ. ಈ ಆಹಾರ ಸಮಸ್ಯೆ ರಾಷ್ಟ್ರೀಯ ಸಮಸ್ಯೆ ಎಂದು ಪರಿಗಣಿಸಬೇಕು, ಇದು ಎಲ್ಲರಿಗೂ ಸಂಬಂಧಪಟ್ಟಿದೆ. ಇದರಲ್ಲಿ ರಾಜಕೀಯ ಪಕ್ಷ ಭಾವನೆ ಇರಬಾರದು. ಶ್ರೀಮಾನ್ ಭಾಸ್ಕರ ಶೆಟ್ಟಿಯವರ ಸಹಿತವಾಗಿ ನಮ್ಮ ಜಿಲ್ಲೆಯವರೆಲ್ಲರನ್ನೂ ಕೂಡಿಸಿಕೊಂಡು ಆಹಾರ ಮಂತ್ರಿಗಳ ಹತ್ತಿರ ಹೋಗಿ ನಾವು ಮನಪೂ ಅವರಿಗೆ ಅರ್ಪಿಸಿದ್ದೇವೆ. ಇದರಲ್ಲಿ ರಾಜಕೀಯವನ್ನು ಅವರು ತೋರಿಸಲಿಲ್ಲ. ಆದರೆ ಅವರು ಈ ಸಭೆಯಲ್ಲಿ ಮಾತನಾಡಿದಾಗ್ಗೆ ಅವರು ರಾಜಕೀಯ ದೃಷ್ಟಿಯಿಂದ ಮಾತನಾಡಿದ ಹಾಗೆ ಕಾಣಿಸಿತು. ಮಂಗಳೂರು ಮತ್ತು ಕೇರಳದ ಗಡಿಯಲ್ಲಿ ಕಳ್ಳ ಸಾಗಾಣಿಕೆ ತಡೆಗಟ್ಟುವುದಕ್ಕೆ ಇರತಕ್ಕ ಚೆಕ್ ಪೋಸ್ಟ್ ಮಾನ್ಯ ಮುಖ್ಯ ಮಂತ್ರಿಗಳು ಬದಲಸಿದ್ದಾರೆ, ಕಾಂಗ್ರೆಸ್ಸಿನವರು ಇದನ್ನು ಹೇಳಿದ್ದಾರೆ, ಹಾಗು ಕಾಂಗ್ರೆಸ್ ಫಂಡಿಗೆ ಒಂದು ಲಕ್ಷ ರೂಪಾಯಿ ತೆಗೆದು ಕೊಂಡರು ಎಂದು ಹೇಳಿರುವುದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದುದು. ನ್ಯಾಯವಾಗಿರುವ ವಿಚಾರವನ್ನು ತಮ್ಮ ಮುಂದೆ ಇಡುತ್ತೇನೆ. ಭಾಸ್ಕರ ಶೆಟ್ಟಿಯವರು ತಮ್ಮ ಕ್ಷೇತ್ರಕ್ಕೆ ಸರಕಾರದಿಂದ ಅಕ್ಕಿ ಪಡೆದು, ಕಾರ್ಡುಗಳ ಮೇರೆ ತಮ್ಮ ಸೀಲು ಹಾಕಿ ತಾನು ಅಕ್ಕಿ ಕೊಡುತ್ತೇನೆ ಎಂದು ಚುನಾವಣೆಯಲ್ಲಿ ಪ್ರಚಾರ ಮಾಡಿದ್ದಾರೆಂದು ಇಲ್ಲಿ ಹೇಳಬೇಕಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದು ಸತ್ಯವಲ್ಲ.

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅವರು ಹೇಳುವುದು ಸತ್ಯಕ್ಕೆ ದೂರವಾದುದು.

ಶ್ರೀ ಬಿ. ಡಿ. ಜತ್ತಿ.—ಈ ರೀತಿ ಇಬ್ಬರೂ ಸದಸ್ಯರು ವಾದ ಹಾಕುವುದು ಸರಿಯಲ್ಲ. ಭಾಸ್ಕರ ಶೆಟ್ಟಿಯವರು ನನ್ನ ಕಡೆ ಬಂದಿದ್ದರು. ಕೊರತೆ ಇದೆ ಅಕ್ಕಿ ಕೊಡಬೇಕೆಂದು ಕೇಳಿದ್ದಾರೆ. ಸರಕಾರ ಅಕ್ಕಿ ಕೊಟ್ಟಿದೆ. ಅದನ್ನು ಜನರಿಗೆ ಕೊಡಲಾಗಿದೆ. ಅಕ್ಕಿ ಭಾಸ್ಕರ ಶೆಟ್ಟಿಯವರೂ ಕೊಟ್ಟಿಲ್ಲ, ನಾನೂ ಕೂಡ ಕೊಟ್ಟಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ಅಕ್ಕಿ ಕೊಟ್ಟಿದ್ದೇನೆಂದು ಹೇಳಿಲ್ಲ.